ಇದರಿಂದ ರಾಜಧಾನಿಯಲ್ಲಿ ಅಶಾಂತಿ ಹರಡಿತು. ವಿಶಾಲ ರೋಮನ್ ಸಾಮ್ರಾಜ್ಯವು ಅವ್ಯವಸ್ಥೆಯ ಗೂಡಾಯಿತು. ಲಿಪಿಡಸ್ ಎಂಬ ವರಿಷ್ಠನ ಬಳಿ ಸೈನ್ಯವಿತ್ತು. ರಾಜ್ಯದ ಕೋಶ ಮತ್ತು ಸಾಧನಗಳು ಆ್ಯಂಟೊನಿಯ ಬಳಿ ಇದ್ದವು. ಆದರೆ ನಿರಂಕುಶತೆಯಿಂದ ಸಂತ್ರಸ್ತರಾದ ಜನತೆ ಯುವನಾಯಕ ಆಕ್ಟೆವಿಯಸ್‌ನ ಕಡೆಗಿದ್ದರು. ರಾಜ್ಯಕ್ಕಾಗಿ ಈ ಮೂವರೂ ಯುದ್ಧದ ಸಿದ್ಧತೆ ನಡೆಸಲಾರಂಭಿಸಿದರು.

ಆಕ್ಟೆವಿಯಸ್‌ನು ತನ್ನ ಗುರು ಸಿಸೆರೋಗೆ ರೋಮ್‌ಗೆ ಬರಲು ಆಹ್ವಾನ ನೀಡುತ್ತಾ ಹೀಗೆ ಪತ್ರ ಬರೆದನು: "ರೋಮಿನ ಮೇಲೆ ಭಯಂಕರ ವಿಪತ್ತು ಎರಗಿದೆ. ನಾನು ಚಿಕ್ಕಂದಿನಿಂದಲೂ ನಿಮ್ಮ ಸಿದ್ಧಾಂತಗಳಿಗೆ ಮನಸ್ಸು ಕೊಟ್ಟಿದ್ದೇನೆ. ಜನತೆ ನನ್ನೊಂದಿಗಿದ್ದಾರೆ. ಆದರೆ ಸೈನ್ಯ ಹಾಗೂ ಹಣದ ಕೊರತೆ ಇದೆ. ಇಂಥ ಸಂಕಟದ ಸಮಯದಲ್ಲಿ ತಾವು ಬಂದು ನನಗೆ ಸಹಾಯ ಮಾಡಿದರೆ ಪ್ರಜಾಪ್ರಭುತ್ವದ ಸ್ಥಾಪನೆ ಸಾಧ್ಯವಾದೀತು."

ಮಾತೃಭೂಮಿಗಾಗಿ ತನ್ನ ಕರ್ತವ್ಯ ಪಾಲಿಸಲು ಸಿಸೆರೋ ರೋಮಿಗೆ ಬಂದ. ಬಹಳ ವರ್ಷಗಳ ನಂತರ ಅವನು ಬಂದಿದ್ದ. ಕೂದಲು ಬೆಳ್ಳಗಾಗಿದ್ದವು, ಹಲ್ಲುಗಳು ಉದುರಿದ್ದವು. ಶರೀರ ಜರ್ಝರಗೊಂಡಿತ್ತು. ಆದರೂ ವಾಣಿಯಲ್ಲಿ ಮೊದಲಿನ ಓಜಸ್ಸಿತ್ತು. ಅವನ ಸಭೆಗಳಿಗೆ ಸಾವಿರ ಸಾವಿರ ಸಂಖ್ಯೆಯಲ್ಲಿ ರೋಮನ್ ನಾಗರಿಕರು ಬರತೊಡಗಿದರು. ಇದರಿಂದ ಆ್ಯಂಟೊನಿ, ಲಿಪಿಡಸ್ ಮತ್ತು ಆಕ್ಟೆವಿಯಸ್ – ಈ ಮೂವರೂ ಜನತೆ ದಂಗೆ ಎದ್ದಾರೆಂದು ಹೆದರಿದರು.

ಕೊನೆಗೆ ಮೂವರೂ ಒಂದು ದಿನ ರೋಮ್‌ನ ಹೊರಗೆ ರಹಸ್ಯವಾಗಿ ಸಭೆ ಸೇರಿದರು. ಅವರೆಲ್ಲರೂ ಹೆದರಿದ್ದರು. ಪರಸ್ಪರ ಯುದ್ಧ ಮಾಡುವುದು ಬೇಡ ಎಂದು ನಿರ್ಧರಿಸಿದರು. ರೋಮನ್ ಸಾಮ್ರಾಜ್ಯ ಮೂರು ಭಾಗವಾಯಿತು – ರೋಮ್, ಬ್ರಿಟನ್–ಸ್ಪೇನ್ ಹಾಗೂ ಆಫ್ರಿಕಾದ ಪ್ರದೇಶ. ರಾಜ್ಯಗಳ ಸಂಚಾಲನೆಗೆ ಹೆಚ್ಚಿನ ಹಣದ ಆವಶ್ಯಕತೆ ಇತ್ತು. ಮೂವರೂ ಸೇರಿ ತಮ್ಮ ತಮ್ಮ ಶ್ರೀಮಂತ ಮಿತ್ರರ ಪಟ್ಟಿ ಮಾಡಿದರು. ಅವರನ್ನು ಕೊಂದು ಹಣ ಸಂಗ್ರಹಿಸುವ ಯೋಜನೆ ಹಾಕಿಕೊಂಡರು. ಈಗ ಆ್ಯಂಟೊನಿ ಹೇಳಿದ, "ಸುಗಮವಾಗಿ ರಾಜ್ಯ ನಡೆಸಲು ಬುದ್ಧಿಜೀವಿಗಳು ಬಹಳ ದೊಡ್ಡ ಅಡ್ಡಿಯಾಗುತ್ತಾರೆ. ಆದ್ದರಿಂದ ಅವರನ್ನು ಆದಷ್ಟು ಬೇಗ ಮುಗಿಸಬೇಕು" ಎಂದು. ಅಂಥವರ ಪಟ್ಟಿಯನ್ನೂ ಮಾಡಲಾಯಿತು. ಅದರಲ್ಲಿದ್ದ ಮೊದಲನೆಯ ಹೆಸರೇ ಸಿಸೆರೋನದಾಗಿತ್ತು. ಆಕ್ಟೆವಿಯಸ್ ಇದಕ್ಕೆ ಒಪ್ಪದೇ, "ಯಾರ ಸಹಾಯದಿಂದ ನಾನು ಇಂದಿನ ಸ್ಥಿತಿ ತಲುಪಿದ್ದೇನೋ, ಯಾರು ನನಗೆ ತಂದೆಯ ಸಮಾನರಾಗಿರುವರೋ ಅವರನ್ನು ಹತ್ಯೆ ಮಾಡಲು ನಾನು ಹೇಗೆ ತಾನೇ ಒಪ್ಪಲಿ?" ಎಂದು ಹೇಳಿದ. ಆ ದಿನದ ಮಟ್ಟಿಗೆ ಮಾತುಕತೆ ನಿಂತಿತು. ಆದರೆ ಮಾರನೆಯ ದಿನ ಆ ಬುದ್ಧಿಜೀವಿಯ ಹತ್ಯೆ ಮಾಡಲು ಮೂವರೂ ಒಮ್ಮತ ವ್ಯಕ್ತಪಡಿಸಿದರು. ಈ ರೀತಿಯಾಗಿ ರೋಮನ್ ಸಾಮ್ರಾಜ್ಯವನ್ನು ಹಂಚಿಕೊಂಡರು.

ಸಿಸೆರೋಗೆ ಇದರ ಸೂಚನೆ ಸಿಕ್ಕಿತು. ಸ್ವಲ್ಪ ಸಮಯದ ನಂತರ ತನ್ನ 'ರಿಪಬ್ಲಿಕಾ' ಎಂಬ ಗ್ರಂಥವನ್ನು ಪೂರ್ತಿ ಮಾಡಿ, ತನ್ನ ಮಗ ಹಾಗೂ ಮಿತ್ರರಿಗೆ ಕೊಡುತ್ತಾ ಅವನು ಹೀಗೆ ಹೇಳಿದ: "ನನ್ನ ಜೀವನದ ಉದ್ದೇಶ ಪೂರ್ತಿಯಾಗಿದೆ. ಇನ್ನು ನಿಮಗೆ ತೊಂದರೆ ಕೊಡುವುದಿಲ್ಲ." ಅವರು ಇವನ ಪ್ರಾಣ ಉಳಿಸುವುದಕ್ಕಾಗಿ, "ಮುಂದೆ ವೇಗವಾಗಿ ಹೋಗುವ ನೌಕೆ ಇದೆ. ಅದನ್ನು ಹತ್ತಿರಿ. ನಾವು ನಿಮ್ಮನ್ನು ಕ್ಷೇಮವಾಗಿ ಗ್ರೀಸ್‌ಗೆ ತಲುಪಿಸುತ್ತೇವೆ. ಗ್ರೀಕ್‌ನ ಜನ ನಿಮ್ಮನ್ನು ಸ್ವಾಗತಿಸಿ ಗೌರವಿಸುತ್ತಾರೆ" ಎಂದರು. ಸಿಸೆರೋ ಹೇಳಿದ, "ಮೃತ್ಯು ಅನಿವಾರ್ಯವಾದದ್ದು. ಹೆಚ್ಚು ಕಾಲ ಬದುಕುವುದಕ್ಕಾಗಿ ಮಾತೃಭೂಮಿಯನ್ನು ತೊರೆದು ಹೋಗುವ ಆಸೆ ನನಗಿಲ್ಲ. ಈ ಮಣ್ಣಿನಲ್ಲಿ ಹುಟ್ಟಿದೆ. ಇದೇ ಮಣ್ಣಿನಲ್ಲಿ ಸೇರಿಹೋಗುವುದರಲ್ಲೇ ನನ್ನ ಆತ್ಮಕ್ಕೆ ಶಾಂತಿ ದೊರಕುತ್ತದೆ. ಒಂದು ಉದ್ದೇಶಕ್ಕಾಗಿ ಮನುಷ್ಯನು ಹುಟ್ಟುತ್ತಾನೆ. ಆ ಉದ್ದೇಶದ ಪೂರ್ತಿಯೇ ಎಲ್ಲಕ್ಕಿಂತ ಹೆಚ್ಚಿನ ಸಾಧನೆ. ಬದುಕುವ ಮೋಹ ಇನ್ನೇಕೆ?"

ಈ ವಿಷಯ ರಾಜಧಾನಿಗೆ ತಲುಪಿತು. ಸಿಸೆರೋನ ತಲೆಗೆ ಬಹಳ ದೊಡ್ಡ ಬಹುಮಾನ ಘೋಷಿಸಲಾಗಿತ್ತು. ಅವನನ್ನು ಬಂಧಿಸಲು ಅನೇಕ ಸಿಪಾಯಿಗಳು ಬಂದರು. ಸಿಸೆರೋನ ಹಿಂಬಾಲಕರು ತಮ್ಮ ಒರೆಗಳಿಂದ ಕತ್ತಿಗಳನ್ನು ಹೊರತೆಗೆದರು. "ಎಚ್ಚರ, ರಕ್ತಪಾತ ಬೇಡ, ಖಂಡಿತಾ ಬೇಡ" ಎನ್ನುತ್ತಾ ಸಿಸೆರೋ ತಾನೇ ಆತ್ಮಸಮರ್ಪಣೆ ಮಾಡಿಕೊಂಡುಬಿಟ್ಟ! ಧನ್ಯ ಸಿಸೆರೋ! ಸೈನಿಕರು ಅವನ ತಲೆ ಮತ್ತು ಕೈಗಳನ್ನು ಕತ್ತರಿಸಿಕೊಂಡು ರೋಮ್‌ಗೆ ಕೊಂಡೊಯ್ದರು. ಸಿಸೆರೋ ಯಾವ ವೃತ್ತದಲ್ಲಿ ನಿಂತು ನೂರಾರು ಬಾರಿ ಜನರನ್ನು ತನ್ನ ಉಪದೇಶದಿಂದ ಧನ್ಯರನ್ನಾಗಿಸಿದ್ದನೋ, ಅದೇ ವೃತ್ತದ ಮಧ್ಯದಲ್ಲಿ ಅವನನ್ನು ನೇತುಹಾಕಲಾಯಿತು. ಸಿಸೆರೋನ ಆತ್ಮಸಮರ್ಪಣೆ ವ್ಯರ್ಥವಾಗಲಿಲ್ಲ. ಪ್ರಜಾಪ್ರಭುತ್ವದ ಬಗೆಗಿನ ಅವನ ಭಾವನೆಗಳು ಜನರ ಮನಸ್ಸಿನಲ್ಲಿ ಅಮರವಾಗಿ ಉಳಿದವು. ಆದರೆ ಸಾಮ್ರಾಟರು ಮತ್ತು ಸಾಮಂತರ ಭೋಗಲಾಲಸೆ ಬೆಳೆಯುತ್ತಾ ಹೋಯಿತು. ರೋಮ್ ಸಾಮ್ರಾಜ್ಯವು ಚೂರುಚೂರಾಗಿ ಒಡೆಯಿತು. ಅದಕ್ಕೆ ಸಾಕ್ಷಿಯಾಗಿ ಅಲ್ಲಿ ಮುರಿದು ಬಿದ್ದ ಕಟ್ಟಡಗಳು ಮಾತ್ರ ಈಗ ಉಳಿದಿವೆ. •